ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟ್‌ನಲ್ಲಿ.

ಸ್ ೧೮೮೭ನೇ ಇಸವಿ ವಿಸಲೇನಿಯಸ್ ನಂಬರ್ 81.

ಅರ್ಜೀದಾರು ಬೆಂಗಳೂರು ರಾಜಾಕಿಂಗನಪೇಟೇಯಲ್ಲಿರುವ ಛವತಿ ಸದರಪ್ಪನ ಹೆಂಡತಿ ಮುನಿಯಮ್ಮ.

ಅರ್ಜಿದಾರಳಿಗೆ ಮೃತಪಟ್ಟ ಕೊಂಡಪ್ಪನು ಗಂಡನಾಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ಸ್ಥಳದ ವಾಸಸ್ಥನಾಗಿ ಮೃತಪಟ್ಟ ಕೊಂಡಪ್ಪನ ಜೆಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿ ಲೇಣೇದುನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಖಾಯಿಷ್‌ಮಾಡಿ ಯಿರುತ್ತಾಳೆ.

ಸದರೀ ದರಖಾಸ್ತನ್ನು 1887ನೇ ಇಸವಿ ಫಿಬ್ರವರೀ ತಿಂಗಳು 18ನೇ ತಾರೀಖಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆ ಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೊಂಡಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

ತಾರೀಖು 2ನೇ ಫಿಬ್ರವರೀ 1887ನೇ ಇಸವಿ.

ದಿವಾಳಿಯಾದ ಡಿಕ್ರಿ ದೇಣೇದಾರ ಮಾಗಡಿ ತಾಲ್ಲೂಕು ಅಕ್ಕಿಸಾಳುನಲ್ಲಿರತಕ್ಕ ಭದ್ರಮ್ಮನ ವಿಷಯದಲ್ಲಿ—

ಸ್ ೧೮೮೬ನೇ ಇಸವಿ ದಿವಾಳಿ ಕೇಸ್ ನಂಬರ್ 478.

ಹುಕ್ಕುಂ.

ಮೇಲ್ಕಂಡ ಭದ್ರಮ್ಮನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಸಬ್ ಜಡ್ಜೀಯವರಾದ ಮೆ॥ ಸಿ. ಕೈಸ್ ಸಾಹೆಬರವರ ರೂಬರೂ ಅರ್ಜೀದಾರಳಾದ ಭದ್ರಮ್ಮನ ಪರವಾಗಿ ಪ್ಲೀಡರ್ ಗೌಸ್ಸಾಹೇಬರನ್ನು ಮತ್ತು ಸದರೀಯವಳ ಲೇಣೇದಾರಾದ ಭದ್ರಯ್ಯನ್ನ ಖುದ್ದಾಗಿಯೂ ವರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಭದ್ರಮ್ಮನು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೊಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್ದಾರೀಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಯಿದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ ೧೮೮೭ನೇ ಯಿಸವಿ ಜನವರೀ 24ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಲುಲಗು.	ಸ್ ಯಾವ ಸಾಲಕ್ಕಾಗಿ ದಸ್ತಗಿರಿ ಮಾಡಲ್ಪಡಬೇಕು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಟಿಪ್ಪಣಿ.
1	ಮಾಗಡಿ ತಾಲ್ಲೂಕು ಗುಬ್ಬೇವೂರನಹಳ್ಳಿಯಲಿರುವ ರುದ್ರಯ್ಯ.	29–0–0	1883	ನೆಲವಂಗಲದ ಮು॥ ಕೋರ್ಟು 1883 ಅರಿಜನಲ್ 286ನೇ ನಂ. ಡಿಕ್ರಿ ಬಾಬತು	

ಸಿ. ಕೈಸ್,
ಸಬ್ ಜಡ್ಜ.